# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## ಸಿ ಮಿಸ್.62/2021

ಸಾಕ್ಷಿಯನ್ನು ದಿಃ 10.08.2022 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

| | | |
|---|---|---|
| ಹೆಸರು | ಅನ್ನಪೂರ್ಣ ಡಿ.ಎಮ್ | ಪಿ.ಡಬ್ಲ್ಯೂಃ 1 |
| ತಂದೆಯ ಹೆಸರು | ಲೋಕೇಶ್ ಕೆ ಸಿ | |
| ವಯಸ್ಸು | 25 ವರ್ಷ | |
| ಕೆಲಸ | ಗೃಹಿಣಿ | |
| ವಾಸಸ್ಥಳ | ಹುಣಸೂರು | |

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-

ನನ್ನ ಹಾಗೂ ಎದುರುದಾರರ ಮದುವೆ ದಿಃ 30.04.2017 ರಂದು ಗುರುಮೂರ್ತಿ ಸ್ವಾಮಿಗಳ ಕಲ್ಯಾಣ ಮಂಟಪ, ಹುಣಸೂರಿನಲ್ಲಿ ಆಗಿರುತ್ತದೆ. ನನ್ನ ಹಾಗೂ ಎದುರುದಾರರ ನಿಶ್ಚಿತಾರ್ಥ ದಿಃ 20.11.2016 ರಲ್ಲಿ ಆಗಿರುತ್ತದೆ. ಸದರಿ ಸಮಯದಲ್ಲಿ ಎದುರುದಾರರಿಗೆ 7 ಗ್ರಾಂ ಉಂಗುರ, ಉಡುಗೊರೆಯಾಗಿ ಬಟ್ಟೆ ನೀಡಿರುತ್ತಾರೆ. ಎದುರುದಾರರ ಮನೆಯಿಂದ ನನಗೆ 3 ಗ್ರಾಂ ಉಂಗುರ ನೀಡಿರುತ್ತಾರೆ. ನಿಶ್ಚಿತಾರ್ಥ ಸಮಯದಲ್ಲಿ ಒಂದು ಲಕ್ಷ ಹಣ ಖರ್ಚು ಮಾಡಿರುತ್ತೇವೆ.

ನಿಶ್ಚಿತಾರ್ಥ ಆದ ನಂತರ ಇನ್ನೂ 240 ಗ್ರಾಂ ಚಿನ್ನ, ಒಂದು ಸೈಟು ಬೈಕು ಬೇಕು ಎಂದು ಡಿಮಾಂಡ್ ಮಾಡಿದರು. ನಮ್ಮ ಮದುವೆ ಸಮಯದಲ್ಲಿ ನನ್ನ ತಂದೆ 180 ಗ್ರಾಂ ಚಿನ್ನ ಹಾಗೂ ಬಟ್ಟೆಗೆಂದು 50,000/- ಹಣ, ಸದರಿ 180 ಗ್ರಾಂ ಚಿನ್ನದಲ್ಲಿ ನನಗೆ ಲಾಂಗ್ ಚೈನುದ ನೆಕ್ಲೇಸ್, ಎದುರುದಾರರಿಗೆ ಬ್ರೇಸ್ ಲೆಟ್ ಹಾಗೂ ಚೈನು, ನನಗೆ ಓಲೆ ಮತ್ತು ಉಂಗುರ ನೀಡಿರುತ್ತಾರೆ.

ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಶಿರಿನ ಜಾವೀದ್ ಅನಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.